**ದಿನಾಂಕ: 08-07-2025ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ವಾಟೀ ಸವಾಲು: 1 ರಿಂದ 3, 6 ಮತ್ತು 7ನೇ ಪ್ರತಿವಾದಿ ಪರ ಶ್ರೀ ಪಿಪಿಕೆ ವಕೀಲರಿಂದ**

1. ನಾನು ಬಿ.ಎಡ್. ವರೆಗೆ ವಿದ್ಯಬ್ಯಾಸ ಮಾಡಿರುತ್ತೇನೆ. ನೀವು ಈ ದಾವೆಯಲ್ಲಿ ಪಹಣಿಗಳನ್ನು ಬಿಟ್ಟು ಬೇರೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಕಮಲಾಬಾಯಿ ಗಂಗಮ್ಮರವರ ಮನೆತನಕ್ಕೆ ಸಂಬಂಧ ಇದೆ ಎಂದು ತೋರಿಸಲು ಯಾವುದೇ ಕಾಗದ ಹಾಜರುಪಡಿಸಿಲ್ಲ ಎಂದರೆ ಹಾಜರುಪಡಿಸಿಲ್ಲ.ಗಂಗಾಬಾಯಿ ಮತ್ತು ಗಂಗಾಬಾಯಿ ಗಂಡರವರು ಕಮಲಾಬಾಯಿಗೆ ಮದುವೆ ಮಾಡಿಕೊಟ್ಟ ಫೋಟೊ ಏನಾದಾರೂ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಮಹಾದೇವಿ ಎನ್ನುವವರಿಗೆ ಶಿವಶಂಕರರವರ ಮನೆಗೆ ಕೊಟ್ಟಿದ್ದರು ಎಂದರೆ ಕೊಟ್ಟಿಲ್ಲ ಎಂದು ಉತ್ತರಿಸುತ್ತಾರೆ. ಶಿವಶಂಕರ ಮಲ್ಲಪ್ಪ ಜೋಳದ ಎಂದು ತೋರಿಸಲು ದಾಖಲು ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಕಮಲಾಬಾಯಿರವರು ಪ್ರತಿವಾದಿರವರ ಮನೆಯಲ್ಲಿ ಹುಟ್ಟಿದ್ದಾರೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಯಾವುದಾದರೂ ಸರಕಾರದಿಂದ ಮಾನ್ಯತೆ ಇರುವ ವಂಶಾವಳಿ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ.ಕಮಲಾಬಾಯಿ ಪ್ರತಿವಾವಯ ಕೂಡು ಕುಟುಂಬದ ಸದಸ್ಯಳೆಂದು ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಯಾವ್ಯಾವ ಹೊಲದಿಂದ ಎಷ್ಟು ಆದಾಯ ಬಂದಿದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ.

2. ಕಮಲಾಬಾಯಿ ಗಂಗಾಬಾಯಿಯ ಮಗಳು ಅಲ್ಲ ಎಂದರೆ ಅವರ ಮಗಳೇ ಎಂದು ಉತ್ತರಿಸುತ್ತಾರೆ. ಪ್ರತಿವಾದ ಪತ್ರವನ್ನು ನಾನು ಓದಿಲ್ಲ. ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ಏನು ಬರೆದಿದ್ದಾರೆ ಎಂದು ನಿಮ್ಮ ವಕೀಲರು ಓದಿ ಹೇಳಿಲ್ಲವೆ ಎಂದರೆ ನಾನು ಕೇಳಿಲ್ಲ ಎಂದು ಉತ್ತರಿಸುತ್ತಾರೆ. ಮಹಾದೇವಿಯನ್ನು ಬಿಟ್ಟು ಉಳಿದ ಹೆಣ್ಣು ಮಕ್ಕಳ

ಹೆಸರು ಸೇರಿಸಿದ್ದೀರಿ ಅವರೇ ಕಮಲಾಬಾಯಿ ಮಕ್ಕಳು ಎಂದು ದಾಖಲೆ ಏನಾದರೂ ಹಾಜರುಪಡಿಸಿದ್ದೀರಾ ಎಂದರೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದು ಉತ್ತರಿಸುತ್ತಾರೆ. ನೀವು ಹಾಜರುಪಡಿಸಿದಂತಹ ಪಹಣಿಗಳ ಮೇಲಿಂದ ಯಾವುದೇ ಸಂಬಂಧ ರುಜುವಾತಾಗಲ್ಲ ಎಂದರೆ ಸರಿಯಲ್ಲ. ಕಮಲಾಯಿಯು ಗಂಗಾಬಾಯಿ ಮಗಳು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**1 ರಿಂದ 3, 6 ಮತ್ತು 7ನೇ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿಯ ಮುಂದುವರೆದ ಪಾಟೀ ಸವಾಲು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ